(ಇನ್ನೂರ ಐವತ್ತು) ಆಯವ್ಯಯದಲ್ಲಿ ಕಾಯ್ದಿರಿಸಲಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಬೆಂಗಳೂರು ಮಹಾನಗರಕ್ಕೆ ತಯಾರಿಸಲಾಗುತ್ತಿರುವ ಮಾಸ್ಟರ್ ಪ್ಲಾನ್–2015 ಕರಡು ಯೋಜನೆಯ ವಲಯ ನಿಯಮಾವಳಿಗಳಲ್ಲಿ ಮಳೆ ನೀರಿನ ಸಂಗ್ರಹವನ್ನು ಕಡ್ಡಾಯಗೊಳಿಸಲು ಉದ್ದೇಶಿಸಲಾಗಿದೆ.

3556 (3792) – ಶ್ರೀ ಕಟ್ಟಾ ಸುಬುಮಣ್ಯ ನಾಯ್ಡು (ಶಿವಾಜಿನಗರ)– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಮೆಟ್ರೊ ರೈಲು ಯೋಜನೆಗೆ ಕೇಂದ್ರ ಸರ್ಕಾರ ಒಪ್ಪಿಗೆ ಸೂಚಿಸುರುವುದು ನಿಜವೇ ?

ಆ) ಈ ಯೋಜನೆಯನ್ನು ಕೈಬಿಟ್ಟು ಪರ್ಯಾಯ ಸಮೂಹ ಸಂಚಾರ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕೆಂದು ಮಾಜಿ ಪ್ರಧಾನ ಮಂತ್ರಿಗಳು ಸರ್ಕಾರಕ್ಕೆ ಕಾಗದ ಬರೆದಿದ್ದಾರೆಯೇ?

ಇ) ಹಾಗಿದ್ದಲ್ಲಿ, ಈ ಯೋಜನೆಯನ್ನು ಕೈಬಿಡಲು ತಿಳಿಸಿರುವ ಕಾರಣಗಳೇನು ?

ಈ) ಸರ್ಕಾರ ಈಗಾಗಲೇ ಈ ಯೋಜನೆಯ ಅನುಷ್ಠಾನಕ್ಕಾಗಿ ಕೈಗೊಂಡ ಕ್ರಮಗಳೇನು ಹಾಗೂ ಖರ್ಚು ಮಾಡಿದ ಹಣವೆಷ್ಟು ?

ಉ) ಈ ಯೋಜನೆಯ ಬಗ್ಗೆ ಸರ್ಕಾರದ ನಿಲುವೇನು ?

ಊ) ಈ ಯೋಜನೆಯ ಕಾಮಗಾರಿಗಳು, ಯಾವಾಗ ಆರಂಭವಾಗುತ್ತದೆ ಹಾಗೂ ಯಾವಾಗ ಪೂರ್ಣಗೊಳ್ಳುವ ನಿರೀಕ್ಷೆ ಇದೆ ?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು) –

ಅ) ಶೀಘ್ರದಲ್ಲೇ ಕೇಂದ್ರ ಸರ್ಕಾರದ ಒಪ್ಪಿಗೆ ದೊರೆಯುವ ನಿರೀಕ್ಷೆ ಇದೆ.

ಆ) ಹೌದು.

ಇ) ಸರ್ಕಾರ ಈ ಯೋಜನೆಯನ್ನು ಕೈಬಿಡುವುದಿಲ್ಲ.

ಈ) ಭಾರತ ಸರ್ಕಾರದ ಯೋಜನಾ ಆಯೋಗವು ಫೆಬ್ರವರಿ, 2002ರ ಅವಧಿಯಲ್ಲಿ ಈ ಯೋಜನೆಗೆ ತತ್ವಶಃ ಒಪ್ಪಿಗೆಯನ್ನು ನೀಡಿದೆ. ದಿನಾಂಕ: 20.2.2004 ರಂದು ನಡೆದ ಪಿ.ಐ.ಬಿ.(ಬಂಡವಾಳ ಹೂಡಿಕೆ ಮಂಡಳಿ) ಯ

ಸಭೆಯು ತನ್ನ ಒಪ್ಪಿಗೆ ನೀಡಿದೆ. ಕೇಂದ್ರ ಸರ್ಕಾರದಿಂದ ಶೀಘ್ರದಲ್ಲಿಯೇ ಒಪ್ಪಿಗೆ ಬರುವ ನಿರೀಕ್ಷೆ ಇದೆ. ಏತನ್ಮಧ್ಯೆ ಕರ್ನಾಟಕ ಸರ್ಕಾರವು ಸರ್ಕಾರಿ ಆದೇಶ ಸಂಖ್ಯೆ : ನಇ 144 ಪಿಆರ್‌ಜೆ 2001 ದಿನಾಂಕ: 24.03.2005 ರಲ್ಲಿ ಬೆಂಗಳೂರು ಮೆಟ್ರೋ ರೈಲು ಯೋಜನೆಯ ಹಂತ–1 ರ ಅನುಷ್ಠಾನಕ್ಕಾಗಿ ರೂ.5605/– ಕೋಟಿ ರೂ.ಗಳ ಪರಿಷ್ಕೃತ ಅಂದಾಜು ವೆಚ್ಚಕ್ಕೆ ಅನುಮೋದನೆ ನೀಡಿದೆ. ಪ್ರಾಥಮಿಕ ಕಾರ್ಯಗಳಾದಂತಹ ಯೋಜನೆ ಹಾಗೂ ವಿನ್ಯಾಸ, ಭೂ ಸ್ವಾಧೀನ ಪಡಿಸಿಕೊಳ್ಳಲು ಸಿದ್ಧತೆ, ಬಳಕೆ ಸೇವೆಗಳ ಸ್ಥಳಾಂತರ, ಇತ್ಯಾದಿ ಆರಂಭಿಕ ಕೆಲಸಗಳನ್ನು ಕೈಗೊಳ್ಳುವುದರೊಂದಿಗೆ ಮುಂದುವರಿಯಲು ಬಿ.ಎಂ.ಆರ್.ಟಿ.ಎಲ್.ಗೆ ಸರ್ಕಾರದ ಅನುಮತಿಯನ್ನು ಸಹ ನೀಡಿದೆ. ಇದುವರೆವಿಗೆ ರಕ್ಷಣಾ ಇಲಾಖೆಯ ಜಮೀನನ್ನು ಸ್ವಾಧೀನಪಡಿಸಿ ಕೊಂಡಿರುವುದೂ ಸೇರಿ ಈ ಯೋಜನೆಗೆ ಒಟ್ಟು 42.47 ಕೋಟಿ ರೂ. ಖರ್ಚಾಗಿರುತ್ತದೆ.

ಊ) ಈ ಯೋಜನೆಯನ್ನು ಅನುಷ್ಠಾನ ಗೊಳಿಸಲು ರಾಜ್ಯ ಸರ್ಕಾರ ಸಂಪೂರ್ಣವಾಗಿ ಬದ್ಧವಾಗಿದೆ.

ಋ) ಈ ಯೋಜನೆಯ ಕಾಮಗಾರಿಗಳು ಆಗಸ್ಟ್, 2005 ರಲ್ಲಿ ಕಾರ್ಯಾರಂಭ ವಾಗಲಿದ್ದು, ಅಕ್ಟೋಬರ್, 2010 ರ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

3557 (3793) ಶ್ರೀ ಕಟ್ಟಾ ಸುಬುಮಣ್ಯ ನಾಯ್ಡು (ಶಿವಾಜಿನಗರ) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ದಂಡು ರೈಲ್ವೆ ನಿಲ್ದಾಣ ಹಾಗೂ ಮಾಧವ ನಗರದ ಬಳಿ ರೈಲ್ವೆ ಕೆಳ ಸೇತುವೆ ಕಾಮಗಾರಿಗಳನ್ನು ಎಂದು ಪ್ರಾರಂಭಿಸಲಾಯಿತು ?

ಆ) ಇವುಗಳ ಅಂದಾಜು ವೆಚ್ಚವೆಷ್ಟು ಹಾಗೂ ಇಲ್ಲಿಯವರೆಗೆ ಇವುಗಳ ನಿರ್ಮಾಣಕ್ಕಾಗಿ ಖರ್ಚು ಮಾಡಿದ ಹಣವೆಷ್ಟು ?

ಇ) ಈ ಕಾಮಗಾರಿಗಳೂ ಯಾವಾಗ ಪೂರ್ಣಗೊಳ್ಳಬೇಕಾಗಿತ್ತು?

ಈ) ಈ ಕಾಮಗಾರಿಗಳು ಪೂರ್ಣಗೊಳ್ಳಲು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು ?

ಉ) ಈ ಕಾಮಗಾರಿಗಳು ಯಾವಾಗ ಪೂರ್ಣಗೊಳ್ಳುವುವು ?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು) –